ಶ್ರೀವ್ಯಾಸರಾಜಪೂಜ್ಯಚರಣವಿರಚಿತ

ಶ್ರೀಬ್ರಹ್ಮಣ್ಯತೀರ್ಥಗುರುರಾಜ

# ಪಂಚರತ್ನಮಾಲಿಕಾಸ್ತೋತ್ರಮ್

**ವಂದೇ ಬ್ರಹ್ಮಣ್ಯತೀರ್ಥಂ ಶುಭತಮಚರಿತಂ ಸೇವಿತಶ್ರೀಸಮೇತಂ ।**
**ಶಾಂತಂ ದಾಂತಂ ಮಹಾಂತಂ ಗುರುಗುಣಭರಿತಂ ಯೋಗಿಸಂಘೈರುಪೇತಂ ॥**
**ಕಾಮಕ್ರೋಧಾದ್ಯತೀತಂ ಕುಮತಿಭಿರಜಿತಂ ಕಲ್ಮಷಾಂಭೋಧಿಪೋತಂ ।**
**ಧೀರಂ ಭೂದೇವಗೀತಂ ಶುಭಜನಮಹಿತಂ ಧನ್ಯಮಾನಂ ವಿನೀತಂ ।೧।**

ಶುಭತಮಚರಿತರಾದ, ಲಕ್ಷ್ಮೀಸಮೇತನಾದ ನಾರಾಯಣನನ್ನು ಸೇವಿಸಿದವರೂ, ಶಾಂತರೂ, ದಾಂತರೂ, ಮಹಾತ್ಮರೂ, ಗುರುಗುಣಭರಿತರೂ, ಯೋಗಿಗಳ ಸಮೂಹದಿಂದ ಸೇವ್ಯರೂ, ಕಾಮಕ್ರೋಧಾದಿಗಳನ್ನು ಅತಿಕ್ರಮಿಸಿದವರೂ, ಕುಮತಿಗಳ ಸಂಬಂಧರಹಿತರೂ, ದುರ್ವಾದಿಗಳನ್ನು ಗೆದ್ದವರೂ, ಪಾಪಾಂಬುಧಿಯನ್ನು ದಾಟಿಸಲು ತೆಪ್ಪದಂತೆ ಇರುವವರೂ, ಧೀರರೂ, ಭೂಸುರರಿಂದಲೂ ಸ್ತುತ್ಯರು, ಸುಜನರಿಂದ ಮಹಿತರೂ, ಶ್ಲಾಘ್ಯವಾದ ಜ್ಞಾನವುಳ್ಳವರೂ, ವಿನೀತರೂ ಆದ, ಬ್ರಹ್ಮಣ್ಯತೀರ್ಥರನ್ನು ವಂದಿಸಿ ಧನ್ಯನಾಗುತ್ತೇನೆ

**ಮಾದ್ಯನ್ಮಾಯಿಗಜೇಂದ್ರಪಂಚವದನಃ ಪ್ರಖ್ಯಾತಕೀರ್ತಿರ್ಮಹಾನ್ ।**
**ಶ್ರೀಮದ್ವಿಟ್ಠಲಪಾದಪದ್ಮಮಧುಪಃ ಸರ್ವೇಷ್ಟಚಿಂತಾಮಣಿಃ ॥**
**ನಿರ್ವ್ಯಾಜೋರುದಯಾಕಟಾಕ್ಷಲಸಿತೋ ಜ್ಞಾನಾದಿಭಾಗ್ಯೋಜ್ವಲಃ ।**
**ಶ್ರೀಬ್ರಹ್ಮಣ್ಯಯತೀಂದ್ರಮಸ್ತಕಮಣಿಃ ಪಾಯಾದಪಾಯಾತ್ಸ ಮಾಂ ।೨।**

ಮದಿಸಿದ ಮಾಯಾವಾದಿಗಳೆಂಬ ಗಜೇಂದ್ರಗಳಿಗೆ ಸಿಂಹಸದೃಶರೂ, ಪ್ರಖ್ಯಾತಕೀರ್ತಿವಂತರೂ, ಉತ್ತಮರೂ, ಶ್ರೀಮದ್ವಿಟ್ಠಲನ ಪಾದಕಮಲ ಭೃಂಗಾಯಮಾನರೂ,

ಸರ್ವೇಷ್ಟ ಚಿಂತಾಮಣಿಯಾದ ನಿರ್ವ್ಯಾಜವೂ ಪೂರ್ಣವೂ ಆದ ಕೃಪಾಕಟಾಕ್ಷದಿಂದ ಶೋಭಿತರೂ, ಜ್ಞಾನಾದಿ ಸಂಪತ್ತುಗಳಿಂದ ಪ್ರಕಾಶಮಾನರೂ ಆದ ಶ್ರೀ ಬ್ರಹ್ಮಣ್ಯತೀರ್ಥ ಯತೀಂದ್ರರು ನನ್ನನ್ನು ಅಪಾಯಗಳಿಂದ ಪಾರುಮಾಡಲಿ

**ಭಿಭ್ರತ್ಕಾಷಾಯಚೇಲಂ ವಿಲಸಿತತುಲಸೀಪಂಕಜಾಕ್ಷಾದಿಮಾಲಂ ।**
**ಧೂತಾ ಜ್ಞಾನಾಘಜಾಲಂ ಮೃದುವಚನಕಲಂ ಚಾರುಸೌಂದರ್ಯಶೀಲಂ ॥**
**ಆರ್ತತ್ರಾಣೈಕಲೋಲಂ ಪ್ರಣತಮುನಿಕುಲಂ ವೈಷ್ಣವಾಗ್ರ್ಯಾನುಕೂಲಂ ।**
**ಬ್ರಹ್ಮಣ್ಯಾರ್ಯಂ ದಯಾಲುಂ ಸ್ಮಿತಮುಖಕಮಲಂ ಸಾದರಂ ತಂ ಭಜೇऽಲಂ ।೩।**

ಕಾಷಾಯವಸ್ತ್ರವನ್ನು ಧರಿಸಿರುವವರೂ, ಉತ್ತಮವಾದ ತುಲಸೀ ಮತ್ತು ಪ್ರಕಾಶ ಮಾನವಾದ ಕಮಲಾಕ್ಷಾದಿ ಮಣಿಮಾಲೆಗಳನ್ನುಳ್ಳವರೂ, ಅಜ್ಞಾನ ಮತ್ತು ಪಾಪಜಾಲ ಗಳನ್ನು ಪರಿಹರಿಸುವವರೂ, ಮಿತವಾದ ವಚನ ಕಲಾಭಿಜ್ಞರಾದ ಸ್ವಾಭಾವಿಕವಾಗಿಯೇ ಪರಮ ಸುಂದರರೂ ಆರ್ತರನ್ನು ರಕ್ಷಿಸುವುದರಲ್ಲೇ ಪರಮಾಸಕ್ತಿಯುಳ್ಳವರೂ, ಮುನಿಸಮುದಾಯದಿಂದ ನಮಸ್ಕೃತರೂ, ವೈಷ್ಣವರಿಗೆ ಶ್ರೇಷ್ಠವಾದ ಅನುಕೂಲಕರರೂ ಮಂದಹಾಸದಿಂದ ಕೂಡಿದ ಮುಖ ಕಮಲವುಳ್ಳವರೂ, ಅನುಗ್ರಹಕರರೂ ಆದ, ಬ್ರಹ್ಮಣ್ಯತೀರ್ಥರನ್ನು ವಿಶೇಷ ಮರ್ಯಾದಾಪೂರ್ವಕ ಸಂಪೂರ್ಣ ಮನಸ್ಸಿನಿಂದ ಭಜಿಸುತ್ತೇನೆ.

**ಯದ್ವೃಂದಾವನದರ್ಶನೇನ ನಿತರಾಂ ಪಾಪಾನಿ ಯಾಂತಿ ಕ್ಷಯಂ ।**
**ಯದ್ವೃಂದಾವನಮೃತ್ತಿಕಾ ಸುವಿಧೃತಾ ತಾಪತ್ರಯಧ್ವಂಸಿನೀ ॥**
**ಯದ್ವೃಂದಾವನ ಸೇವಯಾ ಭುವಿ ಜನಃಪ್ರಾಪ್ನೋತಿ ವಿದ್ಯಾಂ ಸುಖಂ ।@**
**ಸರ್ವಾರಿಷ್ಟನಿವೃತ್ತಯೇऽಸ್ತು ಸ ಚ ಮೇ ಬ್ರಹ್ಮಣ್ಯತೀರ್ಥೋ ಗುರುಃ ।೪।**

ಯಾರ ವೃಂದಾವನದರ್ಶನದಿಂದ ಪಾಪಗಳು ನಿಶ್ಶೇಷವಾಗಿ ನಾಶ ಹೊಂದುವುವೋ, ಯಾರ ವೃಂದಾವನದ ಮೃತ್ತಿಕೆಯು ಭಕ್ತಿಪೂರ್ವಕ ಧರಿಸಲ್ಪಟ್ಟರೆ

ತಾಪತ್ರಯಗಳನ್ನು ಧ್ವಂಸಮಾಡುವುದೋ, ಯಾರ ಬೃಂದಾವನ ಸೇವೆಯಿಂದ ಭೂಮಿಯಲ್ಲಿ ಜನರು ವಿದ್ಯಾ ಸುಖಗಳನ್ನು ಹೊಂದುವರೋ, ಅಂತಹ ಬ್ರಹ್ಮಣ್ಯತೀರ್ಥಗುರುಗಳು ನನ್ನ ದುರದೃಷ್ಟಗಳನ್ನು ನಿವೃತ್ತಿಮಾಡಲಿ.

**ಕುಷ್ಠಶ್ವೇತೋರುಗುಲ್ಮ ಕ್ಷಯಕಠಿಣತರವ್ಯಾಧಿವೈದ್ಯಾಧಿನಾಥೋ ।**
**ಭೂತಪ್ರೇತಗ್ರಹೋಚ್ಚಾಟನಕುಶಲಮಹಾಮಂತ್ರ ಮೂರ್ತಿರ್ಮುನೀಂದ್ರಃ ॥**
**ಸರ್ವಾಭೀಷ್ಟಪ್ರದಾತಾ ಸರಸಸುಹೃದಯಃಪುಣ್ಯಚಾರಿತ್ರನಾಮಾ ।**
**ಭೂಯಾದ್ಬ್ರಹ್ಮಣ್ಯತೀರ್ಥೋ ಗುರುಕುಲತಿಲಕೋ ಭೂಯಸೇ ಶ್ರೇಯಸೇ ಮೇ ।೫।**

ಕುಷ್ಟ (ಮಹಾರೋಗ), ಶ್ವೇತ (ತೊನ್ನು), ಮಹಾಗುಲ್ಮ (ಹೊಟ್ಟೆ–ಯೊಳಗಿನ ಗಂಟುಬೇನೆ), ಕ್ಷಯ ಮೊದಲಾದ ಕಠಿಣತರ ವ್ಯಾಧಿಗಳನ್ನು ನಾಶಪಡಿಸುವ ವಿಷಯದಲ್ಲಿ ವೈದ್ಯಕುಲಗುರುಗಳಾದ, ಭೂತಪ್ರೇತಗ್ರಹಗಳನ್ನು ಓಡಿಸುವುದರಲ್ಲಿ ಸಮರ್ಥರಾದ, ಮಹಾಮಂತ್ರಗಳೇ ಮೂರ್ತಿವೆತ್ತಂತಿರುವ ಮುನೀಂದ್ರರೂ, ಸರ್ವಾಭೀಷ್ಟಪ್ರದಾತೃಗಳೂ, ಕರುಣಾರಸಪೂರ್ಣ ಹೃದಯರೂ, ಪುಣ್ಯಕರವಾದ ನಡೆನುಡಿಗಳಲ್ಲಿ ಹೆಸರಾಂತವರೂ, ಸ್ವಯಂ ಸಂಶಯರಹಿತರಾಗಿ ಮತ್ತೊಬ್ಬರ ಸಂಶಯಗಳನ್ನು ನಿವಾರಿಸುವ ^ ಜ್ಞಾನಿಗಳಿಗೆ ಭೂಷಣರೂ, ಗುರುಕುಲತಿಲಕರೂ ಆದ ಶ್ರೀಬ್ರಹ್ಮಣ್ಯತೀರ್ಥರು ನನ್ನ ಅಧಿಕವಾದ ಶ್ರೇಯಸ್ಸಿಗೆ ಕಾರಣವಾಗಲಿ.

**ಶ್ರೀಮದ್ವ್ಯಾಸರಾಜಪೂಜ್ಯಚರಣರಿಂದ ವಿರಚಿತವಾದ**
**ಶ್ರೀಬ್ರಹ್ಮಣ್ಯತೀರ್ಥಗುರುರಾಜ "ಪಂಚಮಾಲಿಕಾ" ಸ್ತೋತ್ರವು ಸಂಪೂರ್ಣವು**

**ಸಂಗ್ರಹ – ನರಹರಿಸುಮಧ್ವ**

**www.sumadhwaseva.com**